ಮೆಚ್ಚಿ ಮದುವೆಯಾದ ರಾಮನ ಬದುಕಿನ ಏರಿಳಿತಗಳಲ್ಲಿ ಅವನ ಆಯ್ಕೆ–ಆದ್ಯತೆಗಳು ತನ್ನನ್ನು ದೂರ ಸರಿಸುತ್ತಿರುವಾಗಲೂ ಸಹಿಸಿ ನಿಭಾಯಿಸುವ ಸನ್ನಿವೇಶಗಳಿರಬಹುದು, ಸೀತೆ ಎಲ್ಲವನ್ನೂ ಮನಃಪೂರ್ವಕವಾಗಿಯೇ ಮಾಡುತ್ತಾಳೆ. ರಾಮನಂತಹ ಕರ್ತವ್ಯಬದ್ಧ ಗಂಡನ ಜೊತೆಯಲ್ಲಿ ಸೀತೆ ನಡೆದುಕೊಳ್ಳುವುದು ಕರ್ತವ್ಯಬದ್ಧ ಹೆಂಡತಿಯಾಗಲ್ಲ, ಪ್ರೀತಿ ತುಂಬಿದ ಮಡದಿಯಾಗಿ. ದಾಂಪತ್ಯವು ಅವಳಿಗೆ ಕೇವಲ ಕರ್ತವ್ಯವಲ್ಲ, ಅನುರಾಗ. ಆದರೆ ಯಾವ ಸಂದರ್ಭದಲ್ಲೂ ಸೀತೆ ತನ್ನ ಅಸಮ್ಮತಿಯನ್ನು ತೋರಿಸದೆಯೂ ಬಿಡುವುದಿಲ್ಲ ಎನ್ನುವುದನ್ನು ಪಟ್ಟನಾಯಕರು ಅನೇಕ ಸಂದರ್ಭಗಳಲ್ಲಿ ಕಾಣಿಸುತ್ತಾರೆ. ಹೊಂದಾಣಿಕೆ ಮತ್ತು ಭಿನ್ನಾಭಿಪ್ರಾಯಗಳು ಸೀತೆಯ ವ್ಯಕ್ತಿತ್ವದ ಅಖಂಡ ಅಂಶಗಳು ಎನ್ನುವುದನ್ನು ಕಾಣಿಸುವ ಮೂಲಕ ಸೀತೆಗಿದ್ದ 'ಸ್ವ', 'ಸ್ವಪ್ರಜ್ಞೆ'ಯನ್ನು ಸ್ಥಾಪಿಸುತ್ತಾರೆ. ಛಾಯಾ ವ್ಯಕ್ತಿತ್ವವಾದ ಸೀತೆಗೆ ತನ್ನದೇ, ತನ್ನದು ಮಾತ್ರವಾದ ಮನೋಬೌದ್ಧಿಕ ವಿನ್ಯಾಸ ಇರುವುದನ್ನು ಎಲ್ಲೂ ತಪ್ಪದಂತೆ ಪಟ್ಟನಾಯಕರು ತೋರಿಸುತ್ತಾ ಹೋಗುತ್ತಾರೆ. ಆದ್ದರಿಂದಲೇ ಕೃತಿಯ ಕೊನೆಗೆ ಬರುವ ಹೊತ್ತಿಗೆ ಸೀತೆ ಎನ್ನುವ ರೇಖಾಚಿತ್ರ ಪೂರ್ಣವಾಗುತ್ತದೆ. ಅದು ಕೇವಲ 'ಅನುಕೂಲ ಸತಿ'ಯ ಚಿತ್ರವಲ್ಲ, 'ಸುತ್ತೇಳು ನೆರೆಗಂಜಿ' ಬದುಕುವ ಅಳುಮುಂಜಿಯದ್ದಲ್ಲ, ಬದುಕಿನ ಅನಿರೀಕ್ಷಿತಗಳನ್ನು ಧೀರವಾಗಿ ಎದುರಿಸುವ ಹೆಣ್ಣಿನದು. ರಾಮನ ಬಗೆಗೆ ಯಾವಾಗಲೂ ಉದ್ಧರಿಸುವ ವಿಶೇಷಣವೊಂದಿದೆ; ಸ್ಮಿತಾಪೂರ್ವಾಭಿಭಾಷಿ ಎನ್ನುವುದು. ಅದು ಯಾಕೋ ನನಗೆ ಇದು ರಾಮನಿಗಿಂತ ಸೀತೆಗೇ ಹೆಚ್ಚು ಸರಿಯಾಗಿ ಅನ್ವಯಿಸುತ್ತದೆ ಎನ್ನಿಸುತ್ತದೆ. ಎಂಥ ಕಷ್ಟಗಳು ಬಂದಾಗಲೂ ಸೀತೆ ಎಲ್ಲವನ್ನೂ ಮಂದಹಾಸದಿಂದಲೇ ಎದುರಿಸಿದವಳು.

ಸ್ವ–ಸ್ವಪ್ರಜ್ಞೆ ಎನ್ನುವುದು ಹೆಣ್ಣಿಗೆ ಅತ್ಯಗತ್ಯವಾಗಿ ಬೇಕಾಗಿರುವ ಜೀವಧಾತುಗಳು. ಸೀತೆಯಲ್ಲಿ ಅದು ಅತ್ಯಂತ ಪ್ರಖರವಾಗಿತ್ತು. ರಾಮನ ಮೇಲೆ ಅವಳಿಗಿದ್ದ ಅಸಮಾಧಾನಗಳನ್ನು ಅವಳು ಅಳುತ್ತಾ, ಅಸಹಾಯಕತೆಯಲ್ಲಿ, ಅಬಲೆ ಎನ್ನುವ ಆರೋಪಿತ ಮನಸ್ಥಿತಿಯಲ್ಲಿ ಮಾಡುವುದಿಲ್ಲ. ನಿಯಮಗಳು, ನೀತಿಗಳು ಹೆಣ್ಣು ಮತ್ತು ಗಂಡಿಗೆ ಏಕೆ ಮತ್ತು ಹೇಗೆ ಬೇರೆ ಎನ್ನುವ ತಾರ್ಕಿಕ, ನೈತಿಕ ಪ್ರಶ್ನೆಗಳನ್ನು ಸೀತೆ ಸ್ಪಷ್ಟವಾಗಿ ತನಗೂ ಕೇಳಿಕೊಳ್ಳುತ್ತಾಳೆ ಮತ್ತು ನಿರ್ಭಿಡೆಯಿಂದ ಎದುರಿಗಿರುವವರನ್ನೂ ಕೇಳುತ್ತಾಳೆ. ಈ ಆಯಾಮಕ್ಕೆ ಪಟ್ಟನಾಯಕರು ಉದ್ದೇಶಪೂರ್ವಕವಾಗಿಯೇ ಒತ್ತುಕೊಟ್ಟಿದ್ದಾರೆ. ಕೃತಿಯನ್ನು ಗಂಭೀರವಾಗಿಸಿರುವ ಅಂಶ ಇದು.

ಓದುಗರ ಗಮನ ಸೆಳೆಯುವ ಇತರ ಕೆಲವು ಅಂಶಗಳೂ ಇದರಲ್ಲಿವೆ. ನಿಜಕ್ಕೂ ಸುಂದರವಾದ ಚಿತ್ರಗಳನ್ನು ಪಟ್ಟನಾಯಕರು (250ಕ್ಕೂ ಹೆಚ್ಚು) ರಚಿಸಿದ್ದಾರೆ. ಹೆಣ್ಣಿನ ರೇಖಾಚಿತ್ರಗಳಂತೂ ಅವಳನ್ನು ದೇಹದಾಚೆಗೆ ಗುರುತಿಸಲು ತುಡಿಯುತ್ತವೆ. ಅವಳ ವ್ಯಕ್ತಿತ್ವದ ಉಜ್ವಲತೆ, ಪ್ರಖರ ಬುದ್ಧಿಮತ್ತೆ, ಅವಳ ಬಂಡಾಯ, ಅವಳ ಪ್ರೀತಿ, ಅಧಿಕಾರದ ಮದ, ಗಂಡಿನ ಮದ ಈ ಎಲ್ಲವೂ ಚಿತ್ರಗಳಲ್ಲಿ ಶಕ್ತವಾಗಿ ಮೂಡಿವೆ. ಕೃತಿಯುದ್ದಕ್ಕೂ ಇರುವ ಟಿಪ್ಪಣಿಗಳು ಕೆಲವೊಮ್ಮೆ ಅನವಶ್ಯಕ, ಪ್ರದರ್ಶಕ ಅಂತ ಅನ್ನಿಸುತ್ತವೆ. ರೋಚಕ ಮಾಡಲು ನಡೆಸಿರುವ ಗಿಮಿಕ್ ಎಂದೂ ಕೂಡ ಕೆಲವು ಕಡೆಗಳಲ್ಲಿ ಅನ್ನಿಸಿದರೂ ಪಟ್ಟನಾಯಕರ ಓದಿನ ಹರಹನ್ನು, ಅವರ ಆಶಯದ ಗಾಂಭೀರ್ಯವನ್ನು ಈ ಟಿಪ್ಪಣಿಗಳೇ ಹೇಳುತ್ತವೆ.

ರಾಮಾಯಣದ ಗಂಡಿನ ಓದನ್ನು ಗಂಡೇ ಮುರಿಯುವ ಅತ್ಯವಶ್ಯಕ, ಮಹತ್ವದ ಪ್ರಯತ್ನದ ಈ ಕೃತಿಯನ್ನು, ಮೂಲದ ಸಂಕೀರ್ಣತೆ, ಆರ್ದ್ರತೆಯೊಂದಿಗೆ ಪದ್ಮರಾಜ ದಂಡಾವತಿಯವರು ಕನ್ನಡಕ್ಕೆ ತಂದಿದ್ದಾರೆ. ಕನ್ನಡಕ್ಕೆ ಇದೊಂದು ಮಹತ್ವದ ಕೊಡುಗೆ. ಇದಕ್ಕಾಗಿ ಅವರಿಗೂ 'ಮನೋಹರ ಗ್ರಂಥಮಾಲೆ'ಯವರಿಗೂ ಅಭಿನಂದನೆಗಳು.